ಶ್ರೀ ಹೆಚ್.ಡಿ. ರೇವಣ್ಣ:- ಅವರ ಕ್ಷೇತ್ರಕ್ಕೆ ಕೊಡುವ ಹಣದಲ್ಲಿ ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ವಿಷಯ:- ರಾಜ್ಯದಲ್ಲಿ ಬೆಳೆ ವಿಮಾ ಯೋಜನೆ ಕುರಿತು

288 (2041) **ಶ್ರೀ ಡಿ.ಆರ್. ಪಾಟೀಲ್ (ಗದಗ್):-** ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಬೆಳೆ ವಿಮಾ ಯೋಜನೆ ಎಂದಿನಿಂದ ಜಾರಿಗೆ ಬಂದಿದೆ?

ಆ) ಜಾರಿಗೆ ಬಂದ ವರ್ಷದಿಂದ ಈವರೆಗೆ ವಿತರಣೆ ಮಾಡಿರುವ ಬೆಳೆ ವಿಮಾ ಪರಿಹಾರವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಇ) ಬೆಳೆ ವಿಮೆ ಯೋಜನೆಗೆ ತಾಲ್ಲೂಕನ್ನು ಘಟಕವನ್ನಾಗಿ ಮಾಡುವುದರ ಬದಲು ಪಂಚಾಯಿತ್ ಪ್ರದೇಶವನ್ನು ಘಟಕವನ್ನಾಗಿ ಮಾಡುವ ವಿಷಯವು ಸರ್ಕಾರದವರ ಪರಿಶೀಲನೆಯಲ್ಲಿದೆಯೇ ಹಾಗಿದ್ದಲ್ಲಿ ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):-

ಅ) ಬೆಳೆ ವಿಮಾ ಯೋಜನೆಯು 1985ನೇ ಸಾಲಿನ ಮುಂಗಾರು ಹಂಗಾಮಿನಿಂದ ಜಾರಿಯಲ್ಲಿದೆ.

ಆ)

ವರ್ಷ	ವಿತರಿಸಲಾಗಿರುವ ಪರಿಹಾರ ಮೊತ್ತ (ಲಕ್ಷ ರೂ.ಗಳಲ್ಲಿ)
1985-86	372.90
1986-87	327.32
1987-88	715.08
1988-89	ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿರುವುದಿಲ್ಲ.
1989-90	77.05
1990-91	31.74
1991-92	52.95
1992-93	534.21
1993-94	282.58
1994-95	108.88

ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಪಂಚಾಯಿತಿ ಪ್ರದೇಶವನ್ನು ಘಟಕವನ್ನಾಗಿ ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿಲ್ಲ. ಹಾಲಿ, ತಾಲ್ಲೂಕನ್ನು ಘಟಕವನ್ನಾಗಿ ಪರಿಗಣಿಸಲಾಗುತ್ತಿದ್ದು ಹೋಬಳಿಯನ್ನು ಘಟಕವನ್ನಾಗಿ ಪರಿಗಣಿಸುವ ಪ್ರಯತ್ನಗಳು ನಡೆದಿವೆ.

ಅನುಬಂಧ

1986-87ರಿಂದ 1994-95ರವರೆಗೆ ಬೆಳೆ ವಿಮಾ ಯೋಜನೆಯಡಿಯಲ್ಲಿ ವಿತರಣೆಯಾಗಿರುವ ಬೆಳೆ ವಿಮಾ ಪರಿಹಾರ (ಜಿಲ್ಲಾವಾರು ವಿವರ)

ರೂ.ಗಳಲ್ಲಿ

ಜಿಲ್ಲೆ	1986-87	1987-88	1989-90	1990-91	1991-92	1992-93	1993-94	1994-95
ಬೆಂಗಳೂರು(ಗ್ರಾ)	32456.19	115758.55	-	13003.61	86.48	58514.11	-	6237.93
ಕೋಲಾರ	875697.21	-	1151.45	-	2278.88	288101.02	11572.53	158281.54
ತುಮಕೂರು	2716.08	-	-	570668.30	46431.88	23717.25	8303.10	221987.19
ಶಿವಮೊಗ್ಗ	189123.09	2830876.05	-	17715.15	352211.44	238286.48	1857284.94	159199.10
ಚಿತ್ರದುರ್ಗ	784594.87	1277546.76	65542.98	137553.30	82350.68	38483.63	2888.43	104667.48
ಮೈಸೂರು	763281.03	9247532.06	1518.52	334702.93	235.88	-	435.46	608.12
ಮಂಡ್ಯ	-	499866.09	-	-	-	-	-	53343.62
ಕೊಡಗು	615567.63	5671282.77	-	-	-	-	-	-
ಹಾಸನ	795.81	2075610.97	1859.97	9247.79	-	10031.68	-	795.19
ಚಿಕ್ಕಮಗಳೂರು	208406.34	813601.09	-	266107.35	-	-	2501.55	-
ದ.ಕನ್ನಡ	-	542268.65	-	-	164789.83	18622.36	-	-
ಧಾರವಾಡ	7486573.08	17920288.25	6740996.87	1015278.40	302.85	750880.64	19712007.33	790446.35
ಉತ್ತರಕನ್ನಡ	7819331.03	15399163.41	68847.78	-	137372.25	-	240487.88	-
ಬೆಳಗಾಂ	285479.34	543278.48	2751.40	7434.55	169.97	43233.49	12686.72	3132.13

ರೂ.ಗಳಲ್ಲಿ

ಜಿಲ್ಲೆ	1986-87	1987-88	1989-90	1990-91	1991-92	1992-93	1993-94	1994-95
ಬಿಜಾಪುರ	1069829.97	1785066.70	56081.55	102542.88	276440.82	573370.11	2472853.37	1172938.67
ರಾಯಚೂರು	1343882.83	2044536.51	262334.35	205858.46	332655.93	938784.32	2778533.91	5686586.02
ಬಳ್ಳಾರಿ	2446141.50	3226511.04	131011.16	8000.56	369340.27	1664540.71	1067246.80	1657383.58
ಗುಲ್ಬರ್ಗಾ	73106195.04	7195270.84	88763.38	362209.31	3332735.13	48541602.35	43394.33	428617.42
ಬೀದರ್	1496966.08	319381.72	284125.15	123835.07	197172.65	233209.94	47867.50	444232.61
ರಾಜ್ಯ	32731537.12	71507839.94	7704984.52	3174157.66	5294675.94	53421378.09	28258043.85	10888456.95

ಸೂಚನೆ:- 1. ಈ ಯೋಜನೆಯು 1985ರಿಂದ ಅನುಷ್ಟಾನದಲ್ಲಿದ್ದು, ಮೊದಲ ವರ್ಷದ (1985) ವಿಮಾ ಪರಿಹಾರದ ವಿವರಗಳು (ಜಿಲ್ಲಾವಾರು) ಲಭ್ಯವಿರುವುದಿಲ್ಲ.

2. 1988-89ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆ ಇಲ್ಲದ ಪ್ರಯುಕ್ತ ಸದರಿ ವರ್ಷದಲ್ಲಿ ಅನುಷ್ಟಾನವಾಗಿರುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಉತ್ತರದೊಳಗೆ ಈ ಬೆಳೆ ವಿಮೆಯಿಂದ ರೈತರಿಗೆ ಒಂದು ವರ್ಷಕ್ಕೆ ಒಂದು ಕೋಟಿ, 2 ಕೋಟಿ, ಒಂದು ವರ್ಷ ಬರೀ 52 ಲಕ್ಷ, ಒಂದು ವರ್ಷ 31 ಲಕ್ಷ ಈ ರೀತಿ ವಿಮೆ ಹಣ ಸಂದಾಯವಾಗಿದೆಯೆಂದು ಉತ್ತರ ಕೊಟ್ಟಿದ್ದಾರೆ. ಪ್ರತಿ ವರ್ಷ ಈ ವಿಮೆ ಹಣ ಪಡೆಯಲು ಪ್ರೀಮಿಯಂನ್ನು ಎಷ್ಟು ರೈತರು ಕೊಟ್ಟಿದ್ದಾರೆ. ಎರಡನೆಯದು ಯಾವ ಯಾವ ಬೆಳೆಗೆ, ಬೆಳೆ ವಿಮೆ ಜಾರಿಯಲ್ಲಿದೆ? ಇದನ್ನು ಎಲ್ಲಾ ಬೆಳೆಗಳಿಗೆ ವಿಸ್ತರಿಸುವುದಕ್ಕೆ ಇರುವ ತೊಂದರೆಯೇನು? ಮೂರನೆಯದು, ಹಾಲಿ ಬೆಳೆ ಸಾಲ ವಿಮೆ ಇದೆ. ಬೆಳೆ ವಿಮೆ ಇಲ್ಲ. ಸಾಲಗಾರರಲ್ಲದವರಿಗೂ ಈ ಬೆಳೆ ವಿಮೆ ಸೌಲಭ್ಯವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೋ ಹೇಗೆ? ತಾವು ಉತ್ತರ ಕೊಟ್ಟಿರುವುದಲ್ಲಿ, ಹೋಬಳಿಯನ್ನು ಘಟಕವನ್ನಾಗಿ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತೀರಿ. ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಘಟಕವನ್ನು ಮಾಡಲು ಪರಿಶೀಲನೆ ಮಾಡುವುದಕ್ಕೆ ಸರ್ಕಾರಕ್ಕೆ ಇರುವ ತೊಂದರೆ ಏನು?

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಸಭಾಧ್ಯಕ್ಷರೇ, ವಿಮೆಯನ್ನು ರೈತಾಪಿವರ್ಗದ ಜನ ಎಷ್ಟು ಪಾವತಿ ಮಾಡಿದ್ದಾರೆಂದು ಕೇಳಿದ್ದಾರೆ. ಅದರ ಮಾಹಿತಿ ನನ್ನ ಹತ್ತಿರ ಇಲ್ಲ. ಆದರೆ, ಇದರಲ್ಲಿ ಯಾವ ಯಾವ ಬೆಳೆಗಳಿಗೆ ಎಂದರೆ, ಎಲ್ಲಾ ಫುಡ್ ಕ್ರಾಪ್ಸ್ ಆಂಡ್ ಸಿರಿಯಲ್ಸ್ ಯಾವುವು ಎಂದರೆ, ಭತ್ತ, ರಾಗಿ, ಜೋಳ, ಎಣ್ಣೆ ಕಾಳುಗಳು - ಇದಕ್ಕೆ ಮಾತ್ರ ಸೀಮಿತವಾಗಿರತಕ್ಕಂಥಾದ್ದು. ಇದು ಪ್ಲಾಂಟೇಷನ್ ಕ್ರಾಪ್ಸ್‌ಗೆ ಮತ್ತು ಕ್ಯಾಷ್ ಕ್ರಾಪ್ಸ್‌ಗೆ ಅನ್ವಯಿಸುವುದಿಲ್ಲ. ಎರಡನೆಯದು ಬೆಳೆ ವಿಮೆ ಎಂದು ಹೇಳತಕ್ಕಂಥಾದ್ದನ್ನು, ಇವತ್ತು ಏನಾಗಿದೆಯೆಂದರೆ, ತಾಲ್ಲೂಕನ್ನು ಘಟಕವಾಗಿ ತೆಗೆದುಕೊಂಡಿದ್ದಾರೆ. ತಮಗೆ ಗೊತ್ತಿದೆ, 1985ನೇ ಇಸವಿಯಿಂದ ಈ ಬೆಳೆ ವಿಮೆ ಜಾರಿಗೆ ಬಂದಿದ್ದು, ಅಂದಿನಿಂದ ರೈತಾಪಿ ವರ್ಗದ ಜನ ಹಳ್ಳಿಮಟ್ಟದಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಇದನ್ನು ಸೀಮಿತಗೊಳಿಸಬೇಕೆಂದು ಕೇಳಿಕೊಂಡು ಬಂದಿದ್ದಾರೆ. ಆದರೆ, ಕೇಂದ್ರಸರ್ಕಾರ ಇದುವರೆಗೂ ಒಪ್ಪಿಲ್ಲ. ಇವತ್ತಿಗೂ ಕೂಡ ರಾಜ್ಯ ಸರ್ಕಾರದಿಂದ, ಗ್ರಾಮಪಂಚಾಯ್ತಿ ಮಟ್ಟದಲ್ಲಾದರೂ ಈ ಬೆಳೆ ವಿಮೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಹತ್ತಾರು ವರ್ಷಗಳಿಂದ ಕೇಳಿಕೊಂಡು ಬಂದಿದ್ದೇವೆ. ಕೇಂದ್ರಸರ್ಕಾರ ಇದಕ್ಕೆ ಇನ್ನೂ ಕೂಡ ಒಪ್ಪಿಲ್ಲ. ಕಾರಣ, ಇದನ್ನು ಎಲ್ಲಾದರೂ ಮಾಡುವುದಿದ್ದರೆ, ವಿಮೆ ಕಂಪನಿಯವರೂ ಇದನ್ನು ಒಪ್ಪುವುದಕ್ಕೆ ತಯಾರಿಲ್ಲ. ಈ ಪರಿಸ್ಥಿತಿಯಲ್ಲಿ ರಾಜ್ಯಸರ್ಕಾರ ಇದನ್ನು ಪಂಚಾಯ್ತಿಮಟ್ಟದಲ್ಲಾದರೂ ಸೀಮಿತಗೊಳಿಸಿ, ಪಂಚಾಯ್ತಿಮಟ್ಟಕ್ಕೆ ಅನ್ವಯಿಸುವಂತೆ ಮಾಡಬೇಕೆಂದು ಕೇಳುತ್ತಿದ್ದೇವೆ. ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೂ ಕೂಡ ಉತ್ತರ ಬಂದಿಲ್ಲ. ಆದ್ದರಿಂದ, ಇದರ ಬಗ್ಗೆ ಪತ್ರ ವ್ಯವಹಾರ ನಡೆಯುತ್ತಾ ಇದೆ. ಇನ್ನೊಂದು ಪ್ರಶ್ನೆ ತಾವು ಕೇಳಿರತಕ್ಕಂಥಾದ್ದು ಏನಿದೆ, ಯಾರು ಬೆಳೆ ಮೇಲೆ ಸಾಲವನ್ನು ತೆಗೆದುಕೊಳ್ಳುತ್ತಾರೆ, ಅಂಥವರಿಗೆ ಮಾತ್ರ ಇದು ಅನ್ವಯವಾಗುತ್ತದೆ. ಯಾರು ಸಾಲವನ್ನು ಪಡೆದುಕೊಳ್ಳುವುದಿಲ್ಲ, ಅವರಿಗೆ ಇದು ಅನ್ವಯವಾಗುವುದಿಲ್ಲ. ಇದು ಕೇಂದ್ರಸರ್ಕಾರದ ಒಂದು ನಿಯಮ, ಕೇಂದ್ರಸರ್ಕಾರದ ಕಾನೂನು ಅಡಿಯಲ್ಲಿ ಬಂದಿರತಕ್ಕಂಥಾದ್ದು. ಆದುದರಿಂದ ಈ ವಿಚಾರ-

ದಲ್ಲಿ ಈಗಾಗಲೇ ನಾವು ಕೇಂದ್ರಸರ್ಕಾರಕ್ಕೆ ಬರೆದಿದ್ದೇವೆ. ಕೇಂದ್ರಸರ್ಕಾರ ಇಲ್ಲಿಯವರೆಗೂ ಇದರ ಬಗ್ಗೆ ತಮ್ಮ ಸಮರ್ಪಕವಾದ ಉತ್ತರವನ್ನು ಕೊಟ್ಟಿಲ್ಲ.

ಶ್ರೀ ಡಿ.ಆರ್. ಪಾಟೀಲ್:- ಈಗ ಕೇಂದ್ರ ಸರ್ಕಾರದಲ್ಲಿಯೂ ನಮ್ಮವರೇ ಇರುವುದರಿಂದ ಮೊದಲು ಏನೇನಾಗಬೇಕೆಂದು ಅಪೇಕ್ಷೆಪಟ್ಟಿದ್ದಿರಿ, ಅವುಗಳನ್ನು ಈಡೇರಿಸುವುದಕ್ಕೆ ಈಗ ಪ್ರಯತ್ನ ಮಾಡುತ್ತೀರೋ?

ಶ್ರೀ ಎಂ.ಸಿ. ನಾಣಯ್ಯ:- ಪ್ರಯತ್ನ ಮಾಡುತ್ತಾ ಇದ್ದೇವೆ. ಈ ವರ್ಷವೂ ಕೂಡ ನಾವು ಗ್ರಾಮಾಂತರ ಮಟ್ಟದಲ್ಲಿ ಬೆಳೆ ವಿಮೆ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಪತ್ರವನ್ನು ಬರೆದಿದ್ದೇವೆ. ಬಹುಶಃ ಕೇಂದ್ರಸರ್ಕಾರದಲ್ಲಿ ಪ್ರಧಾನಿಗಳ ಜೊತೆಯಲ್ಲೂ ಕೂಡ ನಾವು ಇದರ ಬಗ್ಗೆ ಮಾತುಕತೆಯನ್ನು ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ನಾಣಯ್ಯನವರು ಮತ್ತು ಕೃಷಿ ಸಚಿವರಾದ ಭೈರೇಗೌಡರು ಪ್ರಾಮಾಣಿಕವಾಗಿ ಪ್ರಯತ್ನಪಟ್ಟರೆ, ಇದರಲ್ಲಿ ಸಫಲರಾಗುತ್ತಾರೆನ್ನುವ ಭರವಸೆ ನನಗಿದೆ. ದಯವಿಟ್ಟು ಇದರ ಬಗ್ಗೆ ಕಳಕಳಿಯಿಂದ ಪ್ರಯತ್ನ ಮಾಡಬೇಕೆಂದು ನಾನು ಅವರಲ್ಲಿ ಭಿನ್ನವಿಸುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ:- ಅಧ್ಯಕ್ಷರೇ, ಮಾನ್ಯ ಪಾಟೀಲರಿಗೂ ಗೊತ್ತಿದೆ. ಶ್ರೀಮಾನ್ ಕೆ.ಹೆಚ್. ಪಾಟೀಲರು ಅಂದು ಮಂತ್ರಿಯಾಗಿದ್ದಾಗ ಕೂಡ ನಾವು ದೆಹಲಿಗೆ ಹೋಗಿ, ಇದರ ಬಗ್ಗೆ ಕೇಂದ್ರ ಸರ್ಕಾರದಲ್ಲಿರತಕ್ಕ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಈ ಬೆಳೆ ವಿಮೆ ಯೋಜನೆಯನ್ನು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರಿಗೆ ನಾವು ಒದಗಿಸದೇ ಹೋದರೆ ಎಲ್ಲರಿಗೂ ಸೌಲಭ್ಯ ಸಿಕ್ಕುವುದಿಲ್ಲ. ತಾಲ್ಲೂಕನ್ನೇ ನೀವು ಒಂದು ಯೂನಿಟ್ಟಾಗಿ ತೆಗೆದುಕೊಂಡರೆ, ಇದರ ಲಾಭ ಯಾರಿಗೂ ಸಿಗುವುದಿಲ್ಲ. ನಾವು ಕೊಡತಕ್ಕಂಥ ವಿಮೆ ಹಣ ಯಾವುದಿದೆ, ಅದರಿಂದ ವಿಮಾ ಕಂಪನಿಯವರಿಗೆ ಲಾಭವಾಗುತ್ತದೆ. ವಿಮೆ ಪರಿಹಾರ ಸಿಗತಕ್ಕಂಥಾದ್ದು ಕಡಿಮೆಯಾಗುತ್ತದೆ. ಗ್ರಾಮಾಂತರ ಪ್ರದೇಶಕ್ಕೆ ಇದನ್ನು ವಿಸ್ತರಿಸಿ, ಪ್ರತಿಯೊಬ್ಬ ರೈತರಿಗೂ ಸಿಗುವ ಹಾಗೆ ಮಾಡಬೇಕೆಂದು ಹೇಳಿದಾಗ, ವಿಮಾ ಕಂಪನಿಯವರು ಏನು ಹೇಳುತ್ತಾರೆಂದರೆ, ಎಲ್ಲಾದರೂ ನಮಗೆ ನಷ್ಟವಾದರೆ, ಕೇಂದ್ರಸರ್ಕಾರ ತುಂಬಿ ಕೊಡಬೇಕೆಂದು ಕೇಳಿದ್ದಾರೆ. ಈ ಹಂತದಲ್ಲಿದೆ, ಬಹುಶಃ ಇದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಎಣ್ಣೆ ಕಾಳು ಬೆಳೆಗಳಿಗೆ ವಿಮೆ ಜಾರಿಯಲ್ಲಿದೆ ಎಂದು ಹೇಳಿದ್ದಾರೆ. ತಮಗೆ ಗೊತ್ತಿದೆ ಹತ್ತಿಕಾಳೂ ಸಹ ಎಣ್ಣೆ ಕಾಳು. ಆದ್ದರಿಂದ ದಯಮಾಡಿ ಈ ಡೆಫನೇಷನ್‌ನಲ್ಲಿ ಹತ್ತಿ ಎಣ್ಣೆ ಕಾಳುಗಳಿಗೂ ವಿಮೆ ಜಾರಿಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೀರೋ?

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಅಧ್ಯಕ್ಷರೇ, ಮೊದಲು ಹತ್ತಿ ಆಮೇಲೆ ಕಾಳು. ನಾವು ಕಾಳುಗಳಿಗೆ ಕೊಟ್ಟಿದ್ದೇವೆ. ಹತ್ತಿ ಎಂದು ಹೇಳುತ್ತಾ ಇರತಕ್ಕಂಥಾದ್ದು ಅದು ಕ್ಯಾಷ್ ಕ್ರಾಪ್. ಆದ್ದರಿಂದ ಇದಕ್ಕೆ ಕೇಂದ್ರ ಸರ್ಕಾರ ಒಪ್ಪಿಲ್ಲ.